## 2018 ಕ.ತೀ.ವ. 1029

### (ಧಾರವಾಡ ಪೀಠ)

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

### ಬಸವರಾಜ್ -ವಿರುದ್ಧ- ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಕಚೇರಿ, ಸವಣೂರು ಮತ್ತು ಮತ್ತೊಬ್ಬರು*

**ಮೋಟಾರು ವಾಹನಗಳ ಅಧಿನಿಯಮದ 173(1)ನೇ ಪ್ರಕರಣದಡಿಯಲ್ಲಿನ ಸಂಕೀರ್ಣ ಮೊದಲ ಅಪೀಲು.**

**ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಹಾವೇರಿ ಇವರು ಎಂ.ವಿ.ಸಿ. ಸಂಖ್ಯೆ: 183/2006ರಲ್ಲಿ ದಿನಾಂಕ: 5.1.2009ರಂದು ಅರ್ಜಿಯ ದಿನಾಂಕದಿಂದ ಬಿಡುಗಡೆಯವರೆಗೆ ವಾರ್ಷಿಕ ಶೇಕಡಾ 6ರ ಬಡ್ಡಿಯೊಂದಿಗೆ 1,51,250/- ರೂಪಾಯಿಗಳ ಮೊತ್ತದ ಪರಿಹಾರವನ್ನು ನೀಡಿ ಹೊರಡಿಸಿದ ಪ್ರಶ್ನಿತ ತೀರ್ಪನ್ನು ಪ್ರಶ್ನಿಸುವುದರ ಮೂಲಕ ಅಪೀಲುದಾರ/ಕ್ಲೇಮುದಾರನು ಈ ಅಪೀಲನ್ನು ಹೂಡಿರುತ್ತಾನೆ.**

**ಸೂತ್ರದಲ್ಲಿ ಪ್ರಮುಖವಾಗಿ ಆರ್ಥಿಕ ಹಾನಿಗಳ ಕುರಿತು ಒತ್ತು ನೀಡಲಾಗಿದೆ. ಮಗುವಿಗಾಗಿ ಆದಾಯವಿರುವುದಿಲ್ಲ. ಪ್ರತಿ ವರ್ಷಕ್ಕೆ 15,000/- ರೂಪಾಯಿಗಳ ಕಾಲ್ಪನಿಕ ಆದಾಯವನ್ನು ತೆಗೆದುಕೊಳ್ಳಬೇಕೆಂಬುದು ಗಳಿಸದ ವ್ಯಕ್ತಿಗಳಿಗಾಗಿ ಎರಡನೇ ಅನುಸೂಚಿಯಲ್ಲಿರುವ ಏಕಮಾತ್ರ ಸೂಚನೆಯಾಗಿದೆ. ಮಗುವನ್ನು ಅಂಥ ಗಳಿಸದ ವ್ಯಕ್ತಿಗೆ ಸಮನಾಗಿ ಪರಿಗಣಿಸಲಾಗದು. ಆದ್ದರಿಂದ, ಪರಿಹಾರವನ್ನು, ಮಾಡಿದ ಮತ್ತು/ ಅಥವಾ ಮಾಡಬೇಕಾದ ಚಿಕಿತ್ಸೆ, ಸಾರಿಗೆ, ವೈದ್ಯಕೀಯ ಚಿಕಿತ್ಸಕನ**

* ಎಂಎಫ್ಎ ಸಂಖ್ಯೆ: 22100/2009 (ಎಂವಿ-1), ದಿನಾಂಕ: 5ನೇ ಜುಲೈ, 2017.

ನೆರವು ಇತ್ಯಾದಿಗಾಗಿ ಭರಿಸಿದ ಕಾರ್ಯನಿರ್ವಹಣಾ ಮೊತ್ತಕ್ಕೆ ಹೆಚ್ಚುವರಿಯಾಗಿ ಆರ್ಥಿಕವಲ್ಲದ ಶೀರ್ಷಿಕೆಗಳ ಅಡಿಯಲ್ಲಿ ನಿಗದಿಪಡಿಸಲಾಗಿದೆ. ಬಲಿಪಶುವಾದ ಮಗುವಿನ ಸಂದರ್ಭದಲ್ಲಿ ನೋವು, ಆಘಾತ, ನಿರಾಶೆ, ಸಾಮಾನ್ಯ ಸಂತೋಷಗಳಿಂದ ಹಾಗೂ ಆರೋಗ್ಯಕರ ಮತ್ತು ಚಲನ ಸ್ಥಿತಿಯಲ್ಲಿರುವ ಅವಯವಗಳ ಅನುಭವದಿಂದ ವಂಚಿತನಾಗುವುದು ಇವು ಹಾನಿಯ ಪ್ರಮುಖ ಅಂಶಗಳಾಗಿವೆ. ಆದ್ದರಿಂದ, ಪ್ರಸ್ತುತ ಪ್ರಕರಣದಲ್ಲಿ, ಸುಮಾರು 6 ವರ್ಷಗಳ ಅಪ್ರಾಪ್ತ ವಯಸ್ಕನಾಗಿರುವ ಹಾಗೂ ಅಪಘಾತಕ್ಕೆ ಈಡಾಗಿ ಗಾಯಗಳಿಂದ ಬಳಲಿದ ಗಾಯಗೊಂಡ ಬಸವರಾಜನ ಸಂಬಂಧವಾಗಿ ಅವನ ಗಾಯದ ಪ್ರಮಾಣಪತ್ರದಲ್ಲಿ ಟಿಪ್ಪಣಿ ಮಾಡಿದಂತೆ ಮತ್ತು ನ್ಯಾಯಾಧಿಕರಣವು ತೀರ್ಪು ನೀಡಿದಂತೆ, ಇಡೀ ದೇಹಕ್ಕೆ ಶೇ.60ರಂತೆ ಅಂಗವೈಕಲ್ಯತೆಯನ್ನು ತೆಗೆದುಕೊಳ್ಳಲಾಗಿದೆ. ನ್ಯಾಯಾಧಿಕರಣವು, ಅರ್ಜಿ ಸಲ್ಲಿಸಿದ ದಿನಾಂಕದಿಂದ ಪರಿಹಾರದ ಮೊತ್ತ ವಸೂಲಿಯಾಗುವವರೆಗೆ ವಾರ್ಷಿಕ ಶೇ.6ರ ದರದ ಬಡ್ಡಿಯೊಂದಿಗೆ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ, 1,51,250/- ರೂಪಾಯಿಗಳ ಒಟ್ಟು ಪರಿಹಾರವನ್ನು ನೀಡಿದೆ. ಆದರೆ, ಈ ಅಪೀಲಿನಲ್ಲಿ ಗೊತ್ತುಪಡಿಸಲಾದ ಕಾರಣಗಳು ಮತ್ತು ನಿಶಾನೆ ಪಿ.99ರಂತೆ ಅಂಗವೈಕಲ್ಯತೆ ಪ್ರಮಾಣಪತ್ರವನ್ನು ನೀಡಿರುವ ಪ್ರಾ.ಸಾ.2, ವೈದ್ಯರ ಸಾಕ್ಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ಅಪೀಲುದಾರನ ಪರವಾಗಿ ವಾದಿಸಿದ ಕಾರಣಗಳು ಹಾಗೂ ಅವರು ಮಂಡಿಸಿದ ನಿರ್ಣಯಗಳನ್ನು ನ್ಯಾಯಾಧಿಕರಣವು ತೀರ್ಪು ನೀಡಿದ 99,000/- ರೂಪಾಯಿಗಳಿಗೆ ಬದಲಾಗಿ 4,00,000/- ರೂಪಾಯಿಗಳಂತೆ ಶಾಶ್ವತ ಅಂಗವೈಕಲ್ಯತೆಯ ಶೀರ್ಷಿಕೆಯ ಅಡಿಯಲ್ಲಿ ಪರಿಹಾರವನ್ನು ಹೆಚ್ಚಿಸಿರುವುದರ ಮೂಲಕ ಪ್ರಶ್ನಿತ ತೀರ್ಪಿನಲ್ಲಿ ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಅಗತ್ಯಪಡಿಸಲಾಗಿದೆ.

**ಅದಕ್ಕನುಸಾರವಾಗಿ, ಈ ಅಪೀಲನ್ನು, ಭಾಗಶಃ ಅಂಗೀಕರಿಸಲಾಗಿದೆ. ಅಪೀಲುದಾರ / ಕ್ಲೇಮುದಾರನು, ಅರ್ಜಿಯ ದಿನಾಂಕದಿಂದ ಇಡೀ ಮೊತ್ತದ ಬಿಡುಗಡೆಯ ದಿನಾಂಕದವರೆಗೆ ವಾರ್ಷಿಕ ಶೇ.6ರ ದರದಲ್ಲಿ ಬಡ್ಡಿಯೊಂದಿಗೆ ನ್ಯಾಯಾಧಿಕರಣವು ನೀಡಲಾದ 1,51,250/- ರೂಪಾಯಿಗಳ ಬದಲಾಗಿ 4,52,250/- ರೂಪಾಯಿಗಳ ಪರಿಹಾರವನ್ನು ಹೆಚ್ಚಿಸುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ ಎಂದು ಅಭಿಪ್ರಾಯಪಟ್ಟು ಅಪೀಲನ್ನು ಅಂಗೀಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** **ಪ್ಯಾರಾದಲ್ಲಿ**

*1. 2013 ಎಸಿಜೆ 2445*
*ಮಲ್ಲಿಕಾರ್ಜುನ್ -ವಿರುದ್ಧ- ವಿಭಾಗೀಯ ವ್ಯವಸ್ಥಾಪಕರು,*
*ನ್ಯಾಷನಲ್ ಇನ್‌ಶೂರೆನ್ಸ್ ಕಂ. ಲಿಮಿಟೆಡ್*
*ಮತ್ತು ಮತ್ತೊಬ್ಬರು (ಉಲ್ಲೇ) 8*

ಅರ್ಜಿದಾರರ ಪರ : ಶ್ರೀ ಎನ್.ಪಿ. ವಿವೇಕ್ ಮೆಹ್ತಾ, ವಕೀಲರು.
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಆನಂದ ನವಲಗಿಮಠ್, ಎಜಿಎ.

**ತೀರ್ಪು**

**ನ್ಯಾಯಮೂರ್ತಿ ಕೆ. ಸೋಮಶೇಖರ್:**

ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಹಾವೇರಿ ಇವರು ಎಂ.ವಿ.ಸಿ. ಸಂಖ್ಯೆ: 183/2006ರಲ್ಲಿ ದಿನಾಂಕ: 5.1.2009ರಂದು ಅರ್ಜಿಯ ದಿನಾಂಕದಿಂದ ಬಿಡುಗಡೆಯವರೆಗೆ ವಾರ್ಷಿಕ

ಶೇಕಡಾ 6ರ ಬಡ್ಡಿಯೊಂದಿಗೆ 1,51,250/– ರೂಪಾಯಿಗಳ ಮೊತ್ತದ ಪರಿಹಾರವನ್ನು ನೀಡಿ ಹೊರಡಿಸಿದ ಪ್ರಶ್ನಿತ ತೀರ್ಪನ್ನು ಪ್ರಶ್ನಿಸುವುದರ ಮೂಲಕ ಅಪೀಲುದಾರ ಕ್ಲೇಮುದಾರನು ಈ ಅಪೀಲನ್ನು ಹೂಡಿರುತ್ತಾರೆ.

2. ಅನುಕೂಲದ ಉದ್ದೇಶಕ್ಕಾಗಿ, ಈ ಅಪೀಲಿನಲ್ಲಿ ಪಕ್ಷಕಾರರನ್ನು ನ್ಯಾಯಾಧಿಕರಣದ ಮುಂದೆ ಅವರಿಗೆ ಇದ್ದ ದರ್ಜೆಗೆ ಅನುಸಾರವಾಗಿಯೇ ಉಲ್ಲೇಖಿಸಲಾಗಿದೆ.

3. ದಿನಾಂಕ: 24.9.2004ರಂದು ಅರ್ಜಿದಾರನು ಊಟದ ತರುವಾಯ ತನ್ನ ಸಹೋದರರ ಮನೆಯ ಕಡೆಗೆ ತನ್ನ ಮಗ ಬಸವರಾಜನೊಂದಿಗೆ ತನ್ನ ಮನೆಯಿಂದ ಮಧ್ಯಾಹ್ನ ಸುಮಾರು 2.45ರಲ್ಲಿ ಯಲವಿಗಿಯಲ್ಲಿನ ಸವಣೂರು – ಗದಗ ರಸ್ತೆಯ ಎಡಭಾಗದಲ್ಲಿ ಹೊರಟಿದ್ದರು; ಆ ಸಮಯದಲ್ಲಿ ಸಂಖ್ಯೆ ಸಿಎಜಿ–4706ನ್ನು ಹೊಂದಿದ ಸರ್ಕಾರಿ ಜೀಪು, ಅತಿವೇಗದೊಂದಿಗೆ ದುಡುಕಿನ ಮತ್ತು ನಿರ್ಲಕ್ಷ್ಯತೆಯ ರೀತಿಯಲ್ಲಿ ಸವಣೂರಿನಿಂದ ಯಲವಿಗಿ ಕಡೆಗೆ ಬರುತ್ತಿದ್ದು ಅದು ಅರ್ಜಿದಾರರ ಮಗನಾದ ಬಸವರಾಜುನಿಗೆ ಗುದ್ದಿತು; ತತ್ಪರಿಣಾಮವಾಗಿ, ಬಸವರಾಜನ ತಲೆ ಹಾಗೂ ಅವನ ಬಲ ಪಾದಕ್ಕೆ ತೀವ್ರ ಗಾಯಗಳು ಉಂಟಾದವು ಮತ್ತು ಕೂಡಲೇ ಅವನನ್ನು, ಸವಣೂರುನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು ಮತ್ತು ಆ ತರುವಾಯ ಅವನನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೆಐಎಂಎಸ್ ಆಸ್ಪತ್ರೆ, ಹುಬ್ಬಳಿಗೆ ಸ್ಥಳಾಂತರಿಸಲಾಯಿತು ಮತ್ತು ಅಲ್ಲಿ ಅವನಿಗೆ ಚಿಕಿತ್ಸೆ ನೀಡಲಾಗಿದ್ದು, ಅವನ ತಲೆ ಮತ್ತು ಬಲಪಾದಕ್ಕೆ ಶಸ್ತ್ರ ಚಿಕಿತ್ಸೆ ಮಾಡಲಾಯಿತು ಹಾಗೂ ಎರಡು ತಿಂಗಳಿಗಿಂತ ಹೆಚ್ಚಿನ ಕಾಲ ಆತನು ಚಿಕಿತ್ಸೆ ಪಡೆದನು; ಅರ್ಜಿದಾರನು ಒಳರೋಗಿಯಾಗಿ ಚಿಕಿತ್ಸೆ ಪಡೆದನು. ಸುಮಾರು 6 ವರ್ಷಗಳ ವಯಸ್ಸಿನ ಅರ್ಜಿದಾರನು ಅಪ್ರಾಪ್ತ ವಯಸ್ಕನಾದ್ದರಿಂದ, ಆತನು ತನ್ನ ಅಪ್ರಾಪ್ತ ಪೋಷಕ, ಸಹಜ ತಂದೆಯಿಂದ ಪ್ರತಿನಿಧಿಸಲ್ಪಟ್ಟಿದ್ದಾನೆ ಮತ್ತು ಪರಿಹಾರ ಕೋರಿ ನ್ಯಾಯಾಧಿಕರಣದ ಮುಂದೆ ಅರ್ಜಿಯನ್ನು ಸಲ್ಲಿಸಿದ್ದಾನೆ ಎಂಬುದು ಮೊಕದ್ದಮೆಯ ವಾಸ್ತವಾಂಶಗಳ ಸಂಕ್ಷಿಪ್ತ ಹೇಳಿಕೆಯಾಗಿದೆ.

4. ನೋಟೀಸನ್ನು ಸ್ವೀಕರಿಸಿದ ಮೇಲೆ 1 ಮತ್ತು 2ನೇ ಪ್ರತ್ಯರ್ಜಿದಾರರು, ತಮ್ಮ ನ್ಯಾಯವಾದಿಯ ಮೂಲಕ ಹಾಜರಾಗಿ ಈ ಅರ್ಜಿಯು ಸುಳ್ಳು ಅರ್ಜಿಯಾಗಿದೆ ಹಾಗೂ ಕ್ಲೇಮು ಅರ್ಜಿಯನ್ನು ಸಲ್ಲಿಸುವ ಉದ್ದೇಶಕ್ಕಾಗಿ ಸೃಷ್ಟಿಸಿದುದಾಗಿದೆ ಎಂದು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ ಮತ್ತು ಈ ಅರ್ಜಿಯಲ್ಲಿ ಮಾಡಲಾದ ಎಲ್ಲಾ ಆಪಾದನೆಗಳನ್ನು ಸಹ ಅಲ್ಲಗೆಳೆದಿದ್ದಾರೆ. ಹಾಗಾಗಿ, ಈ ರಿಟ್ ಅರ್ಜಿಯನ್ನು ವಜಾಗೊಳಿಸುವುದಕ್ಕಾಗಿ ಅವರು ಕೋರಿದ್ದಾರೆ.

5. ಪಕ್ಷಕಾರರ ವಾದಗಳ ಆಧಾರದ ಮೇಲೆ, ನ್ಯಾಯಾಧಿಕರಣವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

> *1. ಅರ್ಜಿದಾರನು ರಸ್ತೆಯ ಎಡಗಡೆಯಲ್ಲಿ ಹೋಗುವಾಗ, ಯಲವಿಗಿಯಲ್ಲಿ, ಸವಣೂರು – ಗದಗ ರಸ್ತೆಯಲ್ಲಿ ಮೇಲೆ ದಿನಾಂಕ: 24.9.2004ರಂದು ಸುಮಾರು ಮಧ್ಯಾಹ್ನ 3.00 ಗಂಟೆಯಲ್ಲಿ ಸಂಭವಿಸಿದ ಮೋಟಾರು ಅಪಘಾತದಲ್ಲಿ ಅವನಿಗೆ ಗಾಯಗಳು ಉಂಟಾಗಿದ್ದವೆಂಬುದನ್ನು ಅರ್ಜಿದಾರನು ರುಜುವಾತುಪಡಿಸಿದ್ದಾನೆಯೇ?*
>
> *2. ಅಲ್ಲದೆ, ಮೇಲಿನ ಸದರಿ ಅಪಘಾತವು, ಸಿಎಜಿ–4706 ಸಂಖ್ಯೆಯನ್ನು ಹೊಂದಿದ ಜೀಪು ಚಾಲಕನ ದುಡುಕಿನ ಮತ್ತು ನಿರ್ಲಕ್ಷ್ಯ ಚಾಲನೆಯಿಂದ ಸಂಭವಿಸಿತ್ತೆಂಬುದನ್ನು ಅರ್ಜಿದಾರನು ರುಜುವಾತುಪಡಿಸಿದ್ದಾನೆಯೇ?*
>
> *3. ಹಾಗಿದ್ದಲ್ಲಿ, ಎಷ್ಟು ಮೊತ್ತ ಮತ್ತು ಯಾರಿಂದ, ಅರ್ಜಿದಾರನು, ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆ?*
>
> *4. ಆದೇಶ ಅಥವಾ ತೀರ್ಪು ಏನು?*

6. ಈ ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ, ಅರ್ಜಿದಾರನ ಪೋಷಕರನ್ನು ಪ್ರಾ.ಸಾ.1 ಎಂದು ಪರೀಕ್ಷಿಸಲಾಗಿದೆ ಮತ್ತು ಡಾ|| ಕಾಂತೇಶ್‌ರನ್ನು ಪ್ರಾ.ಸಾ.2 ಎಂಬಂತೆ ಪರೀಕ್ಷಿಸಲಾಗಿದೆ ಹಾಗೂ ನಿಶಾನೆ ಪಿ.1 ರಿಂದ ಪಿ.103ರವರೆಗಿನ ದಸ್ತಾವೇಜುಗಳನ್ನು ಸಹ ಗುರುತಿಸಲಾಗಿದೆ ಮತ್ತು ಅವನ ಕಡೆ ಪರೀಕ್ಷೆಯನ್ನು ಮುಕ್ತಾಯಗೊಳಿಸಲಾಗಿದೆ. ಪ್ರತ್ಯರ್ಜಿದಾರರ ಪರ ಯಾರೇ ಸಾಕ್ಷಿದಾರರನ್ನು ಪರೀಕ್ಷಿಸಿರುವುದಿಲ್ಲ ಹಾಗೂ ಅವರ ಕಡೆಯಿಂದಲೂ ಸಹ ಪರೀಕ್ಷೆಯನ್ನು ಮುಕ್ತಾಯಗೊಳಿಸಲಾಗಿದೆ. ನ್ಯಾಯಾಧಿಕರಣದ ಮುಂದೆ ವಿಚಾರಣೆ ನಡೆಯುತ್ತಿದ್ದ ಅವಧಿಯಲ್ಲಿ, ಕ್ಲೇಮುದಾರನು, ಅಪಘಾತ ಸಂಭವಿಸಿರುವುದನ್ನು, ಅಪರಾಧ ಎಸಗಿದ ವಾಹನದ ಚಾಲಕನ ಕಡೆಯಿಂದ ಆದ ಕ್ರಮಾರ್ಹ ನಿರ್ಲಕ್ಷ್ಯತೆಯಾಗಿದೆ ಎಂದು ಮತ್ತು ಅದರ ವಿಮಾ ರಕ್ಷಣೆಯನ್ನು ರುಜುವಾತುಪಡಿಸಿದ್ದಾರೆ. ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ವಿಶ್ಲೇಷಿಸಿದ ತರುವಾಯ, ನ್ಯಾಯಾಧಿಕರಣವು ಅಪರಾಧ ಎಸಗಲಾದ ವಾಹನದ ಚಾಲಕನ ದುಡುಕಿನ ಮತ್ತು ನಿರ್ಲಕ್ಷ್ಯತೆಯ ಚಾಲನೆಯಿಂದ ಅಪಘಾತ ಸಂಭವಿಸಿದೆ ಎಂದು ನಿರ್ಧರಿಸಿದೆ ಮತ್ತು ತತ್ಪರಿಣಾಮವಾಗಿ ಅರ್ಜಿಯ ದಿನಾಂಕದಿಂದ ಈ ಮುಂದಿನ ಶೀರ್ಷಿಕೆಗಳ ಅಡಿಯಲ್ಲಿ ಪ್ರತ್ಯರ್ಜಿದಾರರಿಂದ ಇಡೀ ಮೊತ್ತವನ್ನು ಬಿಡುಗಡೆ ಮಾಡುವವರೆಗೆ ವಾರ್ಷಿಕ ಶೇ. 6ರ ಬಡ್ಡಿ ಸಹಿತ 1,51,250/- ರೂಪಾಯಿಗಳ ಒಟ್ಟು ಪರಿಹಾರದ ತೀರ್ಪನ್ನು ನೀಡಿದೆ:

| | | |
|---|---|---|
| 1. | ಗಾಯ, ನೋವು ಮತ್ತು ಯಾತನೆ | 24,000/- ರೂಪಾಯಿಗಳು |
| 2. | ಪೋಷಕ ಆಹಾರ, ಪರಿಚಾರಕ ವೆಚ್ಚಗಳು ಮತ್ತು ಸಾಗಣಿಕೆ ವೆಚ್ಚ | 9,750/- ರೂಪಾಯಿಗಳು |
| 3. | ವೈದ್ಯಕೀಯ ವೆಚ್ಚ | 12,000/- ರೂಪಾಯಿಗಳು |
| 4. | ಚಿಕಿತ್ಸೆಯ ಅವಧಿಯಲ್ಲಿ ಉಂಟಾದ ಗಳಿಕೆಯ ನಷ್ಟ | 6,500/- ರೂಪಾಯಿಗಳು |
| 5. | ಖಾಯಂ ಅಂಗವೈಕಲ್ಯತೆಗಾಗಿ | 99,000/- ರೂಪಾಯಿಗಳು |
| | ಒಟ್ಟು | 1,51,250/- ರೂಪಾಯಿಗಳು |

7. ನ್ಯಾಯಾಧಿಕರಣವು ನೀಡಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪು, ಕಾನೂನು ಮಧ್ಯಸ್ಥಿಕೆಗೆ ವಿರುದ್ಧವಾಗಿದೆ ಮತ್ತು ಈ ಮೊಕದ್ದಮೆಯ ದಾಖಲೆಗಳು, ಸಹಜ ನ್ಯಾಯತತ್ವಗಳಿಗೆ ವಿರುದ್ಧವಾಗಿದೆಯೆಂದು ತಮ್ಮ ವಾದಗಳು ನಡೆಯುತ್ತಿದ್ದ ಅವಧಿಯಲ್ಲಿ ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ. ನ್ಯಾಯಾಧಿಕರಣವು ನೀಡಿದ ಪರಿಹಾರವು, ಒಟ್ಟಾರೆಯಾಗಿ ಈ ಮೊಕದ್ದಮೆಯ ದಾಖಲೆಗಳಿಗೆ ಹೋಲಿಸಿದಾಗ ಪರ್ಯಾಪ್ತವಾಗಿವೆ. ಆದ್ದರಿಂದ, ಈ ಅಪೀಲಿನಲ್ಲಿ ಪ್ರಶ್ನಿತ ತೀರ್ಪಿಗೆ ಸಂಬಂಧಿಸಿದಂತೆ ಪ್ರಾ.ಸಾ.1 ಮತ್ತು ಪ್ರಾ.ಸಾ.2 ವೈದ್ಯರು ಮಂಡಿಸಿದ ಸಾಕ್ಷ್ಯ ಹಾಗೂ ಪ್ರತ್ಯರ್ಜಿದಾರರ ವಿರುದ್ಧ ಈ ಮೊಕದ್ದಮೆಯನ್ನು ಸಾಬೀತುಗೊಳಿಸಲು ಹಾಜರುಪಡಿಸಿದ ನಿಶಾನೆ ಪಿ.1ರಿಂದ ಪಿ.103ರಲ್ಲಿರುವ ದಸ್ತಾವೇಜುಗಳನ್ನು ಪರಿಗಣಿಸುವ ಮೂಲಕ ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಅಗತ್ಯಪಡಿಸಲಾಗಿದೆ. ಅಲ್ಲದೆ, ಗಾಯದ ಪ್ರಮಾಣಪತ್ರದಲ್ಲಿ ಬಿಂಬಿಸಿದಂತೆ ಅಪಘಾತದ ಕಾರಣದಿಂದ ಕ್ಲೇಮುದಾರನಿಗೆ ಉಂಟಾದ ಗಾಯಗಳಿಗಾಗಿ ನ್ಯಾಯಾಧಿಕರಣವು ಅತ್ಯಲ್ಪ ಪರಿಹಾರವನ್ನು ನೀಡಿ ತಪ್ಪನ್ನು ಎಸಗಿದೆ ಎಂಬುದರ ಕಡೆಗೆ ಗಮನ ಸೆಳೆಯಲಾಗಿದೆ. ಗಾಯಾಳು ಅಪ್ರಾಪ್ತ ವಯಸ್ಕನಾಗಿರುವುದರಿಂದ, ಅಪಘಾತವು, ಅಪರಾಧ ಎಸಗಿದ ವಾಹನದ ಚಾಲಕನ ದುಡುಕಿನ ಮತ್ತು ನಿರ್ಲಕ್ಷ್ಯದ ಚಾಲನೆಯಿಂದಲೇ ಸಂಭವಿಸಿದೆಯೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಅವರು, ನ್ಯಾಯಾಧಿಕರಣದ ಮುಂದೆ ಅರ್ಜಿಯನ್ನು ಸಲ್ಲಿಸುವ ಮೂಲಕ ಪರಿಹಾರ ಕೋರಿರುವುದರಿಂದ, ಎಲ್ಲಾ ಶೀರ್ಷಿಕೆಗಳ ಅಡಿಯಲ್ಲಿ ಪರಿಹಾರ ನೀಡಬೇಕಿದೆ. ಮುಂದುವರೆದು, ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಪರಿಹಾರವನ್ನು ನೀಡದೇ ನ್ಯಾಯಾಧಿಕರಣವು ತಪ್ಪು ಮಾಡಿದೆ ಎಂಬುದರ ಕಡೆಗೆ ಗಮನ ಸೆಳೆಯಲಾಗಿದೆ.

8. ಅಂಗವೈಕಲ್ಯತೆಯಿಂದ ಬಳಲುತ್ತಿರುವ ಮಕ್ಕಳ ಪ್ರಕರಣದಲ್ಲಿ ಪರಿಹಾರ ನಿರ್ಧರಿಸುವ ಸಂಬಂಧದಲ್ಲಿ, ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ

ನ್ಯಾಯವಾದಿಯು ***ಮಲ್ಲಿಕಾರ್ಜುನ್ –ವಿರುದ್ಧ– ವಿಭಾಗೀಯ ವ್ಯವಸ್ಥಾಪಕರು, ನ್ಯಾಷನಲ್ ಇನ್‌ಶೂರೆನ್ಸ್ ಕಂ. ಲಿಮಿಟೆಡ್ ಮತ್ತು ಮತ್ತೊಬ್ಬರು*** [1] ಮೊಕದ್ದಮೆಯ ಈ ತೀರ್ಪಿನ ಮೇಲೆ ಅವಲಂಬಿಸಿದ್ದು, ಅದರಲ್ಲಿರುವಂತೆ, ಕೆಳಗಿನ ಪ್ಯಾರಾ 8ರಿಂದ 12ರಲ್ಲಿರುವಂತೆ ಅಭಿಪ್ರಾಯಪಟ್ಟಿದೆ:

> *"8. ನ್ಯಾಯಾಧಿಕರಣ ಮತ್ತು ಉಚ್ಚ ನ್ಯಾಯಾಲಯಗಳೆರಡೂ, ಈ ಪ್ರಕರಣದಲ್ಲಿ ಲಭ್ಯವಿರುವ ವೈದ್ಯಕೀಯ ಸಾಕ್ಷ್ಯವನ್ನು ಯುಕ್ತವಾಗಿ ವಿವೇಚಿಸಿರುವುದಿಲ್ಲವೆಂಬುದು ವಿಷಾದಕರವಾದುದಾಗಿದೆ. ಮಗುವಿನ ವಯಸ್ಸು ಮತ್ತು ಅಂಗವೈಕಲ್ಯತೆಯ ಪರಿಣಾಮವಾಗಿ ಅವನ ದೇಹದ ಮೇಲಿನ ಅಂಗವಿಕಾರಗಳನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ. ಆರ್.ಡಿ. ಹಟ್ಟನಗಡಿ –ವಿರುದ್ಧ– ಮೆ: ಪೆಸ್ಟ್ ಕಂಟ್ರೋಲ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಮತ್ತು ಇತರರು [1] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುವಂತೆ ಆರ್ಥಿಕವಲ್ಲದ ಹಾನಿಗಳನ್ನು ಕುರಿತು ನಿರ್ಧರಿಸುವಾಗ, ಮಾನಸಿಕ ಮತ್ತು ದೈಹಿಕ ಆಘಾತ, ನೋವು ಮತ್ತು ಈಗಾಗಲೇ ಪಟ್ಟ ಯಾತನೆ ಮತ್ತು ಮುಂದೆ ಪಡಬಹುದಾದ ಯಾತನೆ, ಓಡಾಡಲು ತೊಂದರೆ ಸಕ್ರಿಯ ಕ್ರೀಡಾ ಚಟುವಟಿಕೆ ಮುಂತಾದವುಗಳಲ್ಲಿ ಭಾಗವಹಿಸಲು ತೊಂದರೆ, ಅನಾನುಕೂಲ, ಕಷ್ಟ, ಅಸೌಖ್ಯತೆ, ನಿರಾಶೆ, ಆಶಾಭಂಗ ಮುಂತಾದಂಥ ಜೀವನದಲ್ಲಿ ದೊರಕಬೇಕಾದ ಸೌಕರ್ಯಗಳ ನಷ್ಟದ ಕಾರಣದಿಂದ ಉಂಟಾಗುವ ಯಾವುವೇ ಭವಿಷ್ಯದ ಹಾನಿ ಕುರಿತು ಬಲಿಪಶುವಾದ ಮಗುವಿನ ಪ್ರಕರಣದಲ್ಲಿ ವಿಶೇಷವಾಗಿ ವ್ಯವಹರಿಸಬೇಕಾಗುತ್ತದೆ. ಮಗು*

1. 2013 ಎಸಿಜೆ 2445

*ಜೀವನದಲ್ಲಿ ಇನ್ನೂ ಬಹಳಷ್ಟು ಕಾಲ ಬಾಳಿಬದುಕಬೇಕಿದೆ. ಬಲಿಪಶುವಾದ ಮಗುವಿನ ಪರವಾಗಿ ಕ್ಲೇಮನ್ನು ಪರಿಗಣಿಸುವಾಗ, ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ, ಮೋಟಾರು ವಾಹನಗಳ ಅಧಿನಿಯಮದ ಎರಡನೇ ಅನುಸೂಚಿಯ ಪ್ರಕಾರ ಇರುವ ಸಿದ್ಧ ಸೂತ್ರವನ್ನು ಅನುಸರಿಸುವುದು ನ್ಯಾಯಯುತ ಮತ್ತು ಸೂಕ್ತವಲ್ಲದ್ದುದ್ದಾಗಿದೆ. ಆರ್ಥಿಕ ಹಾನಿಗಳನ್ನು ಕುರಿತು ಸೂತ್ರದಲ್ಲಿ ಮುಖ್ಯವಾಗಿ ಒತ್ತು ನೀಡಲಾಗಿದೆ. ಮಕ್ಕಳಿಗೆ ಯಾವುದೇ ಆದಾಯವಿರುವುದಿಲ್ಲ. ಗಳಿಕೆ ಇಲ್ಲದ ವ್ಯಕ್ತಿಗಳ ಸಂಬಂಧದಲ್ಲಿ ಎರಡನೇ ಅನುಸೂಚಿಯಲ್ಲಿ ವಾರ್ಷಿಕವಾಗಿ 15,000/- ರೂಪಾಯಿಗಳಂತೆ ಕಾಲ್ಪನಿಕ ಆದಾಯವನ್ನು ತೆಗೆದುಕೊಳ್ಳಲು ಮಾತ್ರ ಸೂಚಿಸಲಾಗಿದೆ. ಮಗುವನ್ನು ಹಾಗೇ ಗಳಿಕೆ ಇಲ್ಲದ ವ್ಯಕ್ತಿಗೆ ಸಮನಾಗಿ ಪರಿಗಣಿಸಲಾಗದು. ಆದ್ದರಿಂದ ಚಿಕಿತ್ಸೆ ನೀಡುವುದಕ್ಕೆ ಮತ್ತು/ಅಥವಾ ನೀಡಬೇಕಿರುವುದಕ್ಕೆ ಸಾರಿಗೆ, ಸಹವರ್ತಿಯ ನೆರವು, ಇತ್ಯಾದಿಗಳಿಗಾಗಿ ಭರಿಸಲಾದ ವಾಸ್ತವಿಕ ಮೊತ್ತಕ್ಕೆ ಹೆಚ್ಚುವರಿಯಾಗಿ ಆರ್ಥಿಕವಲ್ಲದ ಶೀರ್ಷಿಕೆಗಳ ಅಡಿಯಲ್ಲಿ ಪರಿಹಾರವನ್ನು ಲೆಕ್ಕ ಹಾಕಬೇಕಾಗುತ್ತದೆ. ಬಲಿಪಶುವಾದ ಮಗುವಿನ ಸಂದರ್ಭದಲ್ಲಿ ಪರಿಗಣಿಸಬೇಕಾದ ಹಾನಿಯ ಪ್ರಮುಖ ಅಂಶಗಳೆಂದರೆ, ಮಗುವಿಗೆ ಉಂಟಾದ ನಿರಾಶೆ, ಸಾಮಾನ್ಯ ಸಂತೋಷಗಳು ಹಾಗೂ ಆರೋಗ್ಯಕರ ಮತ್ತು ಸುಸ್ಥಿತಿಯಲ್ಲಿರುವ ಅವಯುವಗಳು ಸಹ ಅನುಭವಿಸುವ ಜೀವನ ಸಂತೋಷಗಳಾಗಿವೆ. ನೀಡಲಾದ ಪರಿಹಾರವು, ಮಗು ಅಲ್ಪಸ್ವಲ್ಪ ಆರ್ಜಿಸಲು ಅಥವಾ ಅಂಗವೈಕಲ್ಯತೆಯಿಂದ ಮಗುವಿಗೆ ಉಂಟಾದ ಅನಾನುಕೂಲ ಅಥವಾ ಅಸೌಖ್ಯವನ್ನು ತಕ್ಕಮಟ್ಟಿಗೆ ಸರಿದೂಗಿಸುವ, ಜೀವನಶೈಲಿಯನ್ನು ರೂಪಿಸಿಕೊಳ್ಳಲು ಮಗುವನ್ನು ಶಕ್ತಗೊಳಿಸುವಂತಿರಬೇಕು. ಅಂಗವೈಕಲ್ಯತೆಗಾಗಿ*

*ಸೂಕ್ತ ಪರಿಹಾರವನ್ನು ನಿಗದಿಪಡಿಸುವುದಕ್ಕೆ ಎಲ್ಲ ಆರ್ಥಿಕವಲ್ಲದ ಹಾನಿಗಳನ್ನು ಎಚ್ಚರಿಕೆಯಿಂದ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಈ ಶೀರ್ಷಿಕೆಯಡಿ ಅಷ್ಟೇ ಅಲ್ಲದೆ, ಚಿಕಿತ್ಸೆ, ನೆರವು, ಸಾರಿಗೆ ಇತ್ಯಾದಿ ವಾಸ್ತವಿಕ ವೆಚ್ಚಕ್ಕೂ ಕ್ಲೇಮು ಮಾಡತಕ್ಕದ್ದು.*

*9. ಸಪ್ನ –ವಿರುದ್ಧ– ಯುನೈಟೆಡ್ ಇಂಡಿಯನ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಇನ್ನೊಬ್ಬರು [21 ಇದು, ತನ್ನ ಎಡಗಾಲಿನಲ್ಲಿ ಶೇಕಡ 90ರಷ್ಟು ಅಂಗವೈಕಲ್ಯದಿಂದ ಬಳಲಿದ 12 ವರ್ಷದ ಹುಡುಗಿಗೆ ಸಂಬಂಧಿಸಿದ ಮೊಕದ್ದಮೆಯಾಗಿದೆ. ಈ ಶೀರ್ಷಿಕೆಗಳ ಅಡಿಯಲ್ಲಿ ಈ ನ್ಯಾಯಾಲಯವು 2,00,000/– ರೂಪಾಯಿಗಳ ಒಟ್ಟು ಮೊತ್ತವನ್ನು ಮಂಜೂರು ಮಾಡಿದೆ.*

*10. ಈರಣ್ಣ –ವಿರುದ್ಧ– ಮುಹಮ್ಮದ್ ಆಲಿ ಖಾದರ್‌ಸಾಬ್ ಮುಲ್ಲಾ ಮತ್ತು ಮತ್ತೊಬ್ಬರು (3) ಮೊಕದ್ದಮೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಶೇ.80ರಷ್ಟು ಶಾಶ್ವತ ಅಂಗವೈಕಲ್ಯತೆಯಿಂದ ಬಳಲಿದ ಮಗುವಿಗೆ ಈ ಶೀರ್ಷಿಕೆಗಳ ಅಡಿಯಲ್ಲಿ 4,00,000/– ರೂಪಾಯಿಗಳ ಮೊತ್ತವನ್ನು ಮಂಜೂರು ಮಾಡಿದೆ.*

*11. ಕುಮಾರ್ ಮೈಕಲ್ –ವಿರುದ್ಧ– ಪ್ರಾದೇಶಿಕ ವ್ಯವಸ್ಥಾಪಕರು, ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಇನ್ನೊಬ್ಬರು (4) ಈ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಒಟ್ಟು ಅಂಗವೈಕಲ್ಯತೆಯನ್ನು ಶೇಕಡ*

*16ರಷ್ಟಕ್ಕೆ ಸರಿಹೊಂದಿಸುವುದರೊಂದಿಗೆ, ಎರಡೂ ಕಾಲುಗಳ ಮುರಿತದಿಂದ ಬಳಲುತ್ತಿದ್ದ ಎಂಟು ವರ್ಷ ವಯಸ್ಸಿನ ಮಗುವಿನ ಪ್ರಕರಣವನ್ನು ಪರಿಗಣಿಸಿದೆ. ಈ ಲೆಕ್ಕಾಚಾರಗಳ ಆಧಾರದ ಮೇಲೆ 3,80,000/- ರೂಪಾಯಿಗಳ ಮೊತ್ತಕ್ಕೆ ಹಕ್ಕುಳ್ಳದ್ದಾಗಿರತಕ್ಕದ್ದೆಂದು ಅದು ಅಭಿಪ್ರಾಯಪಟ್ಟಿದೆ.*

*12. ಮೋಟಾರು ವಾಹನ ಅಪಘಾತದ ಕಾರಣದಿಂದ ಅಂಗವೈಕಲ್ಯತೆಯಿಂದ ಬಳಲುವ ಮಕ್ಕಳ ಪ್ರಕರಣದಲ್ಲಿ ನಿಖರ ಪರಿಹಾರವನ್ನು ನಿರ್ಧರಿಸುವುದು ಕಷ್ಟಸಾಧ್ಯವಾಗಿದ್ದರೂ, ಸುಸಂಗತ ಅಂಶಗಳು, ಪೂರ್ವನಿದರ್ಶನಗಳು ಮತ್ತು ವಿವಿಧ ಉಚ್ಚ ನ್ಯಾಯಾಲಯಗಳ ನಿರ್ಣಯಗಳನ್ನು ಗಮನದಲ್ಲಿರಿಸಿಕೊಂಡು, ಚಿಕಿತ್ಸೆ, ವೈದ್ಯಕೀಯ ಸೇವೆ, ಇತ್ಯಾದಿಗೆ ಸಂಬಂಧಿಸಿದ ವಾಸ್ತವಿಕ ವೆಚ್ಚಕ್ಕೆ ಹೆಚ್ಚುವರಿಯಾಗಿ ಇತರ ಎಲ್ಲಾ ಶೀರ್ಷಿಕೆಗಳ ಅಡಿಯಲ್ಲಿ ಸೂಕ್ತ ಪರಿಹಾರವನ್ನು, ಅಂಗವೈಕಲ್ಯತೆಯು ಇಡೀ ದೇಹಕ್ಕೆ ಶೇ.10ಕ್ಕಿಂತ ಹೆಚ್ಚು ಮತ್ತು ಶೇ.30ರವರೆಗೆ ಇದ್ದಲ್ಲಿ, 3 ಲಕ್ಷ ರೂಪಾಯಿಗಳು, ಶೇ.60ರವರೆಗೆ ಇದ್ದಲ್ಲಿ 4 ಲಕ್ಷ ರೂಪಾಯಿಗಳು, ಶೇ.90ರವರೆಗೆ ಇದ್ದಲ್ಲಿ, 5 ಲಕ್ಷ ರೂಪಾಯಿಗಳು ಮತ್ತು ಶೇ.90ಕ್ಕಿಂತ ಮೇಲ್ಪಟ್ಟಿದ್ದಲ್ಲಿ ಅದು 6 ಲಕ್ಷ ರೂಪಾಯಿಗಳಾಗಿರತಕ್ಕದ್ದೆಂಬುದು ನಮ್ಮ ಅಭಿಪ್ರಾಯವಾಗಿದೆ. ಶೇ.10ರವರೆಗಿನ ಶಾಶ್ವತ ಅಂಗವೈಕಲ್ಯತೆಗಾಗಿ, ವಿವಿಧ ಮಾನದಂಡಗಳನ್ನು ತೆಗೆದುಕೊಳ್ಳಬೇಕಾದ ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ 1 ಲಕ್ಷ ರೂಪಾಯಿಗಳಾಗಿರತಕ್ಕದ್ದು. ಪ್ರಸ್ತುತ ಪ್ರಕರಣದಲ್ಲಿ ಅಂಗವೈಕಲ್ಯತೆಯ ಪ್ರಮಾಣವನ್ನು ಶೇಕಡ 18ಕ್ಕೆ ಸರಿಹೊಂದಿಸಲಾಗಿದೆ. ಪೋಷಕರಿಗೆ ಅನಾನುಕೂಲ ಉಂಟಾಗುವುದರ ಜೊತೆಗೆ ಗಳಿಕೆಯ ನಷ್ಟಕ್ಕೂ ಕಾರಣವಾಗಿ*

*ಸುಮಾರು ಎರಡು ತಿಂಗಳ ದೀರ್ಘಾವಧಿ ಕಾಲ ಅಪೀಲುದಾರನು ಅಸ್ಪತ್ರೆಯಲ್ಲಿದ್ದನು".*

9. ಇದಕ್ಕೆ ತದ್ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಸಹಾಯಕ ಸರ್ಕಾರಿ ನ್ಯಾಯವಾದಿಯು ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಸಮರ್ಥಿಸಿಕೊಂಡಿದ್ದಾರೆ ಹಾಗೂ ಅದನ್ನು, ವಿವಿಧ ಕಾರಣಗಳನ್ನು ಒತ್ತಿ ಹೇಳುವುದರ ಮೂಲಕ ಅಪೀಲುದಾರನು ಕೋರಿದಂತೆ ಪರಿಹಾರದ ಹೆಚ್ಚಳಕ್ಕಾಗಿ ಕೋರಲು ಅವರಿಗೆ ಒತ್ತಾಯಿಸಲು ಯಾವ ಸಮರ್ಥನೀಯ ಕಾರಣಗಳು ಇರಲಿಲ್ಲವೆಂದು ಸಮರ್ಥಿಸಿಕೊಂಡಿದ್ದಾರೆ. ಈ ಮೂಲಕ, ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ನ್ಯಾಯಾಧಿಕರಣ ನೀಡಿದ ತೀರ್ಪು ಮತ್ತು ಐತೀರ್ಪನ್ನು ಸ್ಥಿರೀಕರಿಸುವ ಮೂಲಕ ಈ ಅಪೀಲನ್ನು ವಜಾಗೊಳಿಸಲು ಕೋರಿದ್ದಾರೆ.

10. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಮತ್ತು ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಎಜಿಪಿ ರವರು ಮಾಡಿದ ಈ ವಾದಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಾ.ಸಾ.1 ತನ್ನ ಸಾಕ್ಷ್ಯದಲ್ಲಿ ಹೇಳಿದಂತೆ, ಅವನ ಮಗನಿಗೆ ಮೂಳೆ ಮುರಿತದ ಗಾಯಗಳಿಂದಾಗಿ, ಆತನ ಮಗನು ಪೂರ್ಣವಾಗಿ ಕುಳಿತುಕೊಳ್ಳಲು ಓಡಾಡಲು ಶಕ್ತನಾಗಿರುವುದಿಲ್ಲ ಮತ್ತು ಅವನು, ದೈನಂದಿನ ಕೆಲಸ ಕಾರ್ಯಗಳಿಗಾಗಿ ಪ್ರತಿದಿನ ಆತನಿಗೆ ಸಹಾಯಕನ ನೆರವಿನ ಅಗತ್ಯವಿದೆಯೆಂದು ಹೇಳುವುದು ಸುಸಂಗತವಾಗಿದೆ. ಡಾ|| ಕಾಂತೇಶ್ ಅವರ ಸಾಕ್ಷ್ಯವನ್ನು ಸಹ ಅರ್ಜಿದಾರನು ಮಂಡಿಸಿದ್ದಾನೆ. ಸದರಿ ವೈದ್ಯರು ತನ್ನ ಸಾಕ್ಷ್ಯದಲ್ಲಿ ಮಗುವಿನ ಬಲಪಾದದ ಬೆರಳು ಮೂಳೆಗಳ ಸ್ಥಾನಪಲ್ಲಟ ಮುರಿತದೊಂದಿಗೆ ಕಾಲಿನ ಐದು ಎಲಬುಗಳು ಮುರಿದಿವೆಯೆಂದು ಹೇಳಿದ್ದಾರೆ. ಅಂತಿಮವಾಗಿ, ಹಳೆಯ ದಾಖಲೆಯನ್ನು ಗಮನಿಸಿದ ತರುವಾಯ ಮತ್ತು ಕ್ಲಿನಿಕಲ್ ರೇಡಿಯಾಲಾಜಿಕಲ್ ತರುವಾಯ, ನಿರ್ಣಯಕ್ಕೆ ಬರಲಾಗಿದೆ ಮತ್ತು ಅವನ ಬಲ ಕೆಳ ಕಾಲಿಗೆ ಶೇಕಡ 82ರಷ್ಟು ಒಟ್ಟು ಶಾಶ್ವತ ದೈಹಿಕ ಕ್ಷತಿ ಉಂಟಾಗಿದೆ ಎಂದು ನಿರ್ಣಯಿಸಲಾಗಿದೆ. ಅವರು

ನಿಶಾನೆ, ಪಿ.99ರ ಪ್ರಕಾರ ಅಂಗವೈಕಲ್ಯತೆಯ ಪ್ರಮಾಣಪತ್ರವನ್ನು ಸಹ ನೀಡಿದ್ದಾರೆ. ಆದಾಗ್ಯೂ, ಸದರಿ ವೈದ್ಯರು, ಮೇಲ್ಕಂಡ ಅಂಗವೈಕಲ್ಯತೆಯನ್ನು ಇಡೀ ದೇಹಕ್ಕೆ ಅನ್ವಯಿಸಿ ಪರಿಗಣನೆಗೆ ತೆಗೆದುಕೊಂಡಲ್ಲಿ, ಅಂಗವೈಕಲ್ಯತೆ ಪ್ರಮಾಣವನ್ನು ಕಡಿಮೆಗೊಳಿಸಬಹುದಾಗಿದೆ ಮತ್ತು ಸದರಿ ಅಂಗವೈಕಲ್ಯತೆ ಪ್ರಮಾಣ ಕುರಿತು ಬೇರೆ ಬೇರೆ ವೈದ್ಯರ ಅಭಿಪ್ರಾಯದಲ್ಲಿ ವ್ಯತ್ಯಾಸ ಉಂಟಾಗುತ್ತದೆ ಎಂದು ಪಾಟೀ ಸವಾಲಿನಲ್ಲಿ ಹೇಳಿಕೆ ನೀಡಿದ್ದಾರೆ. ಆದಾಗ್ಯೂ, ಅರ್ಜಿದಾರನು, ಭವಿಷ್ಯದಲ್ಲಿ ಕೆಲವು ಅನಾನುಕೂಲತೆಗಳಿಂದ ಬಳಲಬೇಕಾಗುತ್ತದೆ. ಹಾಗಾಗಿ ಆ ಗಾಯಗಳ ತೀವ್ರತೆಯನ್ನು ಪರಿಶೀಲಿಸಲಾಗಿ ಅಪಘಾತ ಸಂಭವಿಸಿದ ಸಮಯದಲ್ಲಿ ಮಗು ಸುಮಾರು 6 ವರ್ಷ ವಯಸ್ಸಿನ ಅಪ್ರಾಪ್ತನಾಗಿದ್ದರಿಂದ ಶಾಶ್ವತ ದೈಹಿಕ ಅಂಗವೈಕಲ್ಯತೆಯನ್ನು ಶೇ. 60ರಂತೆ ತೆಗೆದುಕೊಳ್ಳುವುದು ನ್ಯಾಯಸಮ್ಮತ ಮತ್ತು ಯುಕ್ತವಾದುದುದಾಗಿದೆ. ಅಪೀಲುದಾರನು ಪ್ರಾಮಾಣಿಕವಾಗಿ ಮಂಡಿಸಿದ ಮೇಲೆ ಉಲ್ಲೇಖಿಸಲಾದ ***ಮಲ್ಲಿಕಾರ್ಜುನನ*** ಮೊಕದ್ದಮೆಯಲ್ಲಿ, ಅವಲಂಬನೆಯ ಅನುಪಾತವು ಮುಂದಿದ್ದ ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸಂದರ್ಭಗಳಿಗೆ ಅನ್ವಯಿಸುತ್ತವೆ. ಅದರಲ್ಲಿ ಅಂಗವೈಕಲ್ಯತೆಯಿಂದ ಬಳಲುತ್ತಿದ್ದ ಮಕ್ಕಳ ಸಂದರ್ಭದಲ್ಲಿ, ಪರಿಹಾರದ ನಿರ್ಧರಣೆಯ ತತ್ವಗಳ ಬಗ್ಗೆ ಅದು ಅಭಿಪ್ರಾಯಪಟ್ಟಿರುವಂತೆ, ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ, ವಿವಿಧ ಮಾನದಂಡಗಳನ್ನು ತೆಗೆದುಕೊಂಡು ಚಿಕಿತ್ಸೆ, ವೈದ್ಯಕೀಯ ಸೇವೆ, ಇತ್ಯಾದಿಗಾಗಿ ವಾಸ್ತವಿಕ ವೆಚ್ಚಕ್ಕೆ ಹೆಚ್ಚುವರಿಯಾಗಿ ಇತರೇ ಎಲ್ಲಾ ಶೀರ್ಷಿಕೆಗಳ ಅಡಿಯಲ್ಲಿ ಯುಕ್ತ ಪರಿಹಾರವು, ಇಡೀ ದೇಹಕ್ಕೆ ಶಾಶ್ವತ ಅಂಗವೈಕಲ್ಯತೆಯನ್ನು ಅದು ಶೇ. 10ರವರೆಗೆ ಇದ್ದರೆ, 1,00,000/- ರೂಪಾಯಿಗಳಾಗಿರತಕ್ಕದ್ದು. ಶೇ. 10ಕ್ಕೂ ಮೇಲ್ಪಟ್ಟು ಮತ್ತು ಶೇಕಡಾ 30ರವರೆಗೆ ಇದ್ದರೆ 3,00,000/- ರೂಪಾಯಿಗಳಾಗಿರತಕ್ಕದ್ದು. ಶೇ. 60ರವರೆಗೆ ಇದ್ದರೆ 4,00,000/- ರೂಪಾಯಿಗಳಾಗಿರತಕ್ಕದ್ದು. ಶೇ. 90ರವರೆಗೆ ಇದ್ದರೆ 6,00,000/- ರೂಪಾಯಿಗಳಾಗಿರತಕ್ಕದ್ದು ಎಂದು ತೀರ್ಮಾನಿಸಲಾಗಿದೆ. ಆದಾಗ್ಯೂ, ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ಮೋಟಾರು ವಾಹನಗಳ ಅಧಿನಿಯಮದ ಎರಡನೇ ಅನುಸೂಚಿಯ ಪ್ರಕಾರ ರೂಪಿಸಲಾದ ಸೂತ್ರವನ್ನು ಅನುಸರಿಸುವುದು ನ್ಯಾಯಯುತ ಮತ್ತು ಸೂಕ್ತವಾದುದಲ್ಲ ಎಂದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ

ನ್ಯಾಯವಾದಿಯು ವಾದ ಮಂಡಿಸಿರುವ ಈ ಹಿಂದೆ ಹೇಳಿದ ತೀರ್ಪಿನಲ್ಲಿ ಅಭಿಪ್ರಾಯ ಪಡಲಾಗಿದೆ.

11. ಸೂತ್ರದಲ್ಲಿ ಪ್ರಮುಖವಾಗಿ ಆರ್ಥಿಕ ಹಾನಿಗಳ ಕುರಿತು ಒತ್ತು ನೀಡಲಾಗಿದೆ. ಮಗುವಿಗೆ ಆದಾಯವಿರುವುದಿಲ್ಲ. ಪ್ರತಿ ವರ್ಷಕ್ಕೆ 15,000/– ರೂಪಾಯಿಗಳ ಕಾಲ್ಪನಿಕ ಆದಾಯವನ್ನು ತೆಗೆದುಕೊಳ್ಳಬೇಕೆಂಬುದು ಗಳಿಸದ ವ್ಯಕ್ತಿಗಳಿಗಾಗಿ ಎರಡನೇ ಅನುಸೂಚಿಯಲ್ಲಿರುವ ಏಕಮಾತ್ರ ಸೂಚನೆಯಾಗಿದೆ. ಮಗುವನ್ನು ಅಂಥ ಗಳಿಸದ ವ್ಯಕ್ತಿಗೆ ಸಮನಾಗಿ ಪರಿಗಣಿಸಲಾಗದು. ಆದ್ದರಿಂದ, ಪರಿಹಾರವನ್ನು, ಮಾಡಿದ ಮತ್ತು/ಅಥವಾ ಮಾಡಬೇಕಾದ ಚಿಕಿತ್ಸೆ, ಸಾರಿಗೆ, ವೈದ್ಯಕೀಯ ಚಿಕಿತ್ಸಕನ ನೆರವು ಇತ್ಯಾದಿಗಾಗಿ ಭರಿಸಿದ ಕಾರ್ಯನಿರ್ವಹಣಾ ಮೊತ್ತಕ್ಕೆ ಹೆಚ್ಚುವರಿಯಾಗಿ ಆರ್ಥಿಕವಲ್ಲದ ಶೀರ್ಷಿಕೆಗಳ ಅಡಿಯಲ್ಲಿ ನಿಗದಿಪಡಿಸಲಾಗಿದೆ. ಬಲಿಪಶುವಾದ ಮಗುವಿನ ಸಂದರ್ಭದಲ್ಲಿ ನೋವು, ಆಘಾತ, ನಿರಾಶೆ, ಸಾಮಾನ್ಯ ಸಂತೋಷಗಳಿಂದ ಹಾಗೂ ಆರೋಗ್ಯಕರ ಮತ್ತು ಚಲನಸ್ಥಿತಿಯಲ್ಲಿರುವ ಅವಯವಗಳ ಅನುಭವದಿಂದ ವಂಚಿತನಾಗುವುದು ಇವು ಹಾನಿಯ ಪ್ರಮುಖ ಅಂಶಗಳಾಗಿವೆ. ಆದ್ದರಿಂದ, ಪ್ರಸ್ತುತ ಪ್ರಕರಣದಲ್ಲಿ, ಸುಮಾರು 6 ವರ್ಷಗಳ ಅಪ್ರಾಪ್ತ ವಯಸ್ಕನಾಗಿರುವ ಹಾಗೂ ಅಪಘಾತಕ್ಕೆ ಈಡಾಗಿ ಗಾಯಗಳಿಂದ ಬಳಲಿದ ಗಾಯಗೊಂಡ ಬಸವರಾಜನ ಸಂಬಂಧವಾಗಿ ಅವನ ಗಾಯದ ಪ್ರಮಾಣಪತ್ರದಲ್ಲಿ ಟಿಪ್ಪಣಿ ಮಾಡಿದಂತೆ ಮತ್ತು ನ್ಯಾಯಾಧಿಕರಣವು ತೀರ್ಪು ನೀಡಿದಂತೆ, ಇಡೀ ದೇಹಕ್ಕೆ ಶೇ. 60ರಂತೆ ಅಂಗವೈಕಲ್ಯತೆಯನ್ನು ತೆಗೆದುಕೊಳ್ಳಲಾಗಿದೆ. ನ್ಯಾಯಾಧಿಕರಣವು, ಅರ್ಜಿ ಸಲ್ಲಿಸಿದ ದಿನಾಂಕದಿಂದ ಪರಿಹಾರದ ಮೊತ್ತ ವಸೂಲಿಯಾಗುವವರೆಗೆ ವಾರ್ಷಿಕ ಶೇ. 6ರ ದರದ ಬಡ್ಡಿಯೊಂದಿಗೆ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ, 1,51,250/– ರೂಪಾಯಿಗಳ ಒಟ್ಟು ಪರಿಹಾರವನ್ನು ನೀಡಿದೆ. ಆದರೆ, ಈ ಅಪೀಲಿನಲ್ಲಿ ಗೊತ್ತುಪಡಿಸಲಾದ ಕಾರಣಗಳು ಮತ್ತು ನಿಶಾನೆ ಪಿ.99ರಂತೆ ಅಂಗವೈಕಲ್ಯತೆ ಪ್ರಮಾಣಪತ್ರವನ್ನು ನೀಡಿರುವ ಪ್ರಾ.ಸಾ.2, ವೈದ್ಯರ ಸಾಕ್ಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ಅಪೀಲುದಾರನ ಪರವಾಗಿ ವಾದಿಸಿದ ಕಾರಣಗಳು ಹಾಗೂ ಅವರು ಮಂಡಿಸಿದ

ನಿರ್ಣಯಗಳನ್ನು ನ್ಯಾಯಾಧಿಕರಣವು ತೀರ್ಪು ನೀಡಿದ 99,000/- ರೂಪಾಯಿಗಳಿಗೆ ಬದಲಾಗಿ 4,00,000/- ರೂಪಾಯಿಗಳಂತೆ ಶಾಶ್ವತ ಅಂಗವೈಕಲ್ಯತೆಯ ಶೀರ್ಷಿಕೆಯ ಅಡಿಯಲ್ಲಿ ಪರಿಹಾರವನ್ನು ಹೆಚ್ಚಿಸಿರುವುದರ ಮೂಲಕ ಪ್ರಶ್ನಿತ ತೀರ್ಪಿನಲ್ಲಿ ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಅಗತ್ಯಪಡಿಸಲಾಗಿದೆ. ಕೋಷ್ಟಕದ ನಮೂನೆಯಲ್ಲಿರುವ, ನ್ಯಾಯಾಧಿಕರಣವು ನೀಡಿದ ಉಳಿದ ಪರಿಹಾರವನ್ನು ಹಂಚಿಕೆ ಮಾಡಿರುವುದಿಲ್ಲ. ಆದ್ದರಿಂದ, ನ್ಯಾಯಾಧಿಕರಣವು ನೀಡಿದ ಪರಿಹಾರವನ್ನು ಕೆಳಗಿನಂತೆ ಮರುನಿರ್ಧರಿಸಲಾಗಿದೆ:

| | | |
|---|---|---|
| 1. | ಗಾಯ, ನೋವು ಮತ್ತು ಯಾತನೆ | 24,000/- ರೂಪಾಯಿಗಳು |
| 2. | ಪೋಷಕ ಆಹಾರ, ಪರಿಚಾರಕ ವೆಚ್ಚಗಳು ಮತ್ತು ಸಾಗಣಿಕೆ ವೆಚ್ಚ | 9,750/- ರೂಪಾಯಿಗಳು |
| 3. | ವೈದ್ಯಕೀಯ ವೆಚ್ಚಗಳು | 12,000/- ರೂಪಾಯಿಗಳು |
| 4. | ಚಿಕಿತ್ಸೆಯ ಅವಧಿಯಲ್ಲಿ ಉಂಟಾದ ಗಳಿಕೆಯ ನಷ್ಟ | 6,500/- ರೂಪಾಯಿಗಳು |
| 5. | ಶಾಶ್ವತ ಅಂಗವೈಕಲ್ಯತೆಗಾಗಿ | 4,00,000/- ರೂಪಾಯಿಗಳು |
| | ಒಟ್ಟು | 4,52,250/- ರೂಪಾಯಿಗಳು |

12. ಅದಕ್ಕನುಸಾರವಾಗಿ, ಈ ಅಪೀಲನ್ನು, ಭಾಗಶಃ ಅಂಗೀಕರಿಸಲಾಗಿದೆ. ಅಪೀಲುದಾರನು/ಕ್ಲೇಮುದಾರನು, ಅರ್ಜಿಯ ದಿನಾಂಕದಿಂದ ಇಡೀ ಮೊತ್ತದ ಬಿಡುಗಡೆಯ ದಿನಾಂಕದವರೆಗೆ ವಾರ್ಷಿಕ ಶೇ. 6ರ ದರದಲ್ಲಿ ಬಡ್ಡಿಯೊಂದಿಗೆ ನ್ಯಾಯಾಧಿಕರಣವು ನೀಡಲಾದ 1,51,250/- ರೂಪಾಯಿಗಳ ಬದಲಾಗಿ 4,52,250/- ರೂಪಾಯಿಗಳ ಪರಿಹಾರವನ್ನು ಹೆಚ್ಚಿಸುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ. ಆದಾಗ್ಯೂ, ನೀಡಲಾದ ಇಡೀ ಪರಿಹಾರ ಮೊತ್ತವನ್ನು ಐದು ವರ್ಷಗಳ ಅವಧಿಗಾಗಿ ಅಥವಾ

ಅವನು ಪ್ರಾಪ್ತ ವಯಸ್ಸಿಗೆ ಬರುವವರೆಗೆ, ಅದರಲ್ಲಿ ಅನಂತರ ಯಾವುದು ಮೊದಲೋ ಅಲ್ಲಿಯವರೆಗೆ ಸಾವಧಿ ಠೇವಣಿಯಲ್ಲಿ ಇಡತಕ್ಕದ್ದು ಎಂದು ಹೇಳಿ ನ್ಯಾಯಾಧಿಕರಣವು ತೀರ್ಪು ನೀಡಿದೆ. ಈ ಅಪೀಲಿನಲ್ಲೂ ಸಹ, ಅಪೀಲುದಾರನು ಇಡೀ ಪರಿಹಾರದ ಮೊತ್ತವನ್ನು ಐದು ವರ್ಷಗಳ ಅವಧಿಗಾಗಿ ಅಥವಾ ಅವನು ಪ್ರಾಪ್ತ ವಯಸ್ಸಿಗೆ ಬರುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಯಾವುದೇ ರಾಷ್ಟ್ರೀಕೃತ ಅಥವಾ ವಾಣಿಜ್ಯ ಬ್ಯಾಂಕ್‌ನ ಸಾವಧಿ ಠೇವಣಿಯಲ್ಲಿ ಠೇವಣಿಯಿಡತಕ್ಕದ್ದು ಮತ್ತು ಅಪ್ರಾಪ್ತನು ಗಾಯಗೊಂಡಿರುವುದರಿಂದ/ ಕ್ಲೇಮುದಾರನಾಗಿರುವುದರಿಂದ ಆತನ ಕ್ಷೇಮಾಭಿವೃದ್ಧಿಗಾಗಿ ಕಾಲಕಾಲಕ್ಕೆ ಸಂಚಿತವಾದ ಬಡ್ಡಿಯನ್ನು ಪಡೆದುಕೊಳ್ಳಲು ಅವನ ಪೋಷಕನಿಗೆ/ತಂದೆಗೆ ಅನುಮತಿ ನೀಡಲಾಗಿದೆ.